

ರಮ್ಯಾ-ಡಿಕೆಶಿ
ಏಟು
ಎದುರೇಟು
»5


# ಉದಯವಾಣಿ

ಜನಮನದ ಜೀವನಾಡಿ

www.udayavani.com | Hubballi ಹುಬ್ಬಳ್ಳಿ | ಶುಕ್ರವಾರ, ಮೇ 13, 2022 | ಪುಟ 10+8 | ₹ 5.00 ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲಬುರಗಿ | ದಾವಣಗೆರೆ | ಮುಂಬೈ

# ಕೈಗಾರಿಕಾ ಕಲಿಕೆಗಾಗಿ ಡೈರಿಗೆ ಭೇಟಿ




**ಕೊಪ್ಪಳ: ನಗರದ ಶ್ರೀಗವಿಸಿದ್ದೇಶ್ವರ ಪದವಿ ಕಾಲೇಜಿನ ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕೈಗಾರಿಕಾ ಭೇಟಿ ಕಾರ್ಯಕ್ರಮ ತಾಲೂಕಿನ ಬೂದಗುಂಪಾ ನಂದಿನಿ ಡೈರಿಯಲ್ಲಿ ಜರುಗಿತು.**

**ಕೊಪ್ಪಳ:** ನಗರದ ಶ್ರೀ ಗವಿಸಿದ್ಧೇಶ್ವರ ಪದವಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಚಾಣಕ್ಯ ವಾಣಿಜ್ಯ ಸಂಘದಡಿ ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕೈಗಾರಿಕಾ ಭೇಟಿ ಕಾರ್ಯಕ್ರಮ ತಾಲೂಕಿನ ಬೂದಗುಂಪಾ ನಂದಿನಿ ಡೈರಿಯಲ್ಲಿ ಜರುಗಿತು. ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿ ಸಿಂಡಿಕೇಟ್ ಸದಸ್ಯ ಡಾ. ಬಸವರಾಜ ಪೂಜಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಭಾಗದ ಖ್ಯಾತ ಸಂಸ್ಥೆಯಾದ ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಸಂಘದ ಬೂದಗುಂಪಾ ಘಟಕಕ್ಕೆ ಭೇಟಿ ನೀಡಿ ಘಟಕದ ಸಹಾಯಕ ವ್ಯವಸ್ಥಾಪಕ ರವಿಕುಮಾರ ಅವರಿಂದ ವಿವಿಧ ಮಾಹಿತಿ ಪಡೆಯಲಾಯಿತು. ಉತ್ಪಾದನಾ ವ್ಯವಸ್ಥಾಪಕ ಸಂಜೀವ ಅವರು ವಿದ್ಯಾರ್ಥಿಗಳಿಗೆ ಹಾಲಿನ ಸಂಸ್ಕರಣೆ, ಪ್ಯಾಕಿಂಗ್, ಗುಣಮಟ್ಟ ಪರೀಕ್ಷೆ, ಲೇಬಲಿಂಗ್ ಮತ್ತು ಮಾರುಕಟ್ಟೆಗೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ನಂತರದಲ್ಲಿ ವಿವಿಧ ರೀತಿಯ ಹಾಲಿನ ಉತ್ಪನ್ನಗಳ ತಯಾರಿಸುವ ರೀತಿ ಮತ್ತು ಅವುಗಳ ಗುಣಮಟ್ಟದ ಪರೀಕ್ಷೆಯನ್ನು ಪ್ರಾಯೋಗಿಕವಾಗಿ ವಿವರಿಸಿದರು. ಈ ವೇಳೆ ವಿಭಾಗದ ಮುಖ್ಯಸ್ಥ ಜಾಲಿಹಾಳ ಶರಣಪ್ಪ, ಚಾಣಕ್ಯ ವಾಣಿಜ್ಯ ಸಂಘದ ಸಂಯೋಜಕ ಶ್ರೀದೇವಿ, ಪ್ರಾಧ್ಯಾಪಕ ಡಾ. ಕರಿಬಸವೇಶ್ವರ, ವಾಣಿಜ್ಯ ವಿಭಾಗದ ವಿದ್ಯಾರ್ಥಿ ಪ್ರತಿನಿಧಿ ವಚನಶ್ರೀ ಹಾಗೂ ನಿಂಗರಾಜ ಉಪಸ್ಥಿತರಿದ್ದರು.